ಶ್ರೀ ಸಿ. ಬೈರೇಗೌಡ.— ಮಾನ್ಯ ಸಚಿವರಿಗೆ ಸ್ಪೀಕರ್‌ರವರ ಸ್ಥಾನದಲ್ಲಿ ಕುಳಿತುಕೊಂಡು ಉತ್ತರ ಕೊಡತಕ್ಕಂಥಾದ್ದು ಆಗುವುದಿಲ್ಲ. ಇದಕ್ಕೆ ಉತ್ತರ ಕೊಡತಕ್ಕಂಥಾವರು ಅಧ್ಯಕ್ಷರೇ.

ಶ್ರೀ ಎಸ್. ಬಂಗಾರಪ್ಪ.— ನೀವು ಪ್ರಸ್ತಾಪ ಮಾಡಿರತಕ್ಕಂಥಾದ್ದು ಸದನದ ಗೌರವದ ಪ್ರಶ್ನೆ—

ಶ್ರೀ ಸಿ. ಬೈರೇಗೌಡ.— ಉತ್ತರ ಹೇಳಬೇಕಾಗಿರುವುದು ಮಂತ್ರಿಗಳಲ್ಲ, ಅಧ್ಯಕ್ಷರು ಹೇಳಬೇಕು. ಇದಕ್ಕೆ ಮಂತ್ರಿಗಳು ಉತ್ತರ ಹೇಳತಕ್ಕಂಥಾದ್ದಲ್ಲ. ಉತ್ತರ ಅಧ್ಯಕ್ಷರ ಪೀಠದಿಂದ ಬರಬೇಕು. ಅಧ್ಯಕ್ಷ ಸ್ಥಾನದಲ್ಲಿರತಕ್ಕವರು ಉತ್ತರ ಹೇಳಬೇಕೇ ವಿನಹ ಮಂತ್ರಿಗಳಲ್ಲ.

೧೨ ಪುತ್ತೂರು ತಾಲ್ಲೂಕಿನಲ್ಲಿ ವಿದ್ಯುತ್ ಸೌಕರ್ಯ ಒದಗಿಸಲು ಹೆಚ್ಚು ವಿದ್ಯುತ್ ಕಂಬಗಳ ಪೂರೈಕೆಗೆ ಒತ್ತಾಯ

ಶ್ರೀ ವಿನಯ ಕುಮಾರ್ ಸೊರಕೆ.— ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕಿನಲ್ಲಿ ೧೯೮೬–೮೭ನೇ ಸಾಲಿನಲ್ಲಿ ವಿದ್ಯುತ್ ದೀಪ ಯೋಜನೆಯನ್ವಯ ೪೦೦ ಮನೆಗಳಿಗೆ ಎರಡು ಟ್ಯೂಬ್‌ಲೈಟ್ ಒದಗಿಸುವನ್ವಯ ರಾಷ್ಟ್ರೀಕೃತ ಲೀಡ್ ಬ್ಯಾಂಕ್ ಹಾಗೂ ವಿದ್ಯುತ್ ಇಲಾಖೆಯವರು ಆಳವಡಿಸಲು ಕೇಳಲಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಧಾರಣವಾಗಿ ಮನೆಗಳು ಹತ್ತಿರ ಹತ್ತಿರವಾಗಿ ಇಲ್ಲದೆ ಇರುವುದರಿಂದ ಸಾಧ್ಯವಾದಷ್ಟು ಜನತಾ ಕಾಲೋನಿಗಳನ್ನೇ ಆರಿಸಿಕೊಂಡಿದ್ದರೂ ಕೂಡ ವಿದ್ಯುತ್ ಇಲಾಖೆಯವರು ಕೊಟ್ಟಂತಹ ೪೦೦ ಕಂಬಗಳಲ್ಲಿ ೪೮೦ ಮನೆಗಳನ್ನು ಆಳವಡಿಸಿಕೊಳ್ಳಲು ಅಸಾಧ್ಯವಾಗಿದೆ. ಇದರ ಬಗ್ಗೆ ಹೆಚ್ಚಿನ ಬೇಡಿಕೆ ಕಂಡುಬಂದರೂ ರಾಷ್ಟ್ರೀಕೃತ ಬ್ಯಾಂಕ್ ಅವರು ಇದರ ಬಗ್ಗೆ ಹೆಚ್ಚಿನ ಮನೆಗಳಿಗೆ ಆರ್ಥಿಕ ಸಹಾಯ ಕೊಡಲು ಆಸಕ್ತಿ ವಹಿಸಿದ್ದರೂ ವಿದ್ಯುತ್ ಕಂಬದ ಕೊರತೆಯಿಂದ ಬರೀ ೨೮೪ ಮನೆಗಳಿಗೆ ವಿದ್ಯುತ್ ಸೌಲಭ್ಯ ಒದಗಿಸಲು ಸಾಧ್ಯವಾಗಿದೆ. ಈ ಹಿಂದೆ ಸಂಬಂಧಪಟ್ಟ ವಿದ್ಯುತ್ ಮಂತ್ರಿಗಳಿಗೆ ಪತ್ರ ಮೂಲಕ ಮನವಿ ಮಾಡಿದ್ದರೂ ಯಾವುದೇ ರೀತಿಯ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ಮಾನ್ಯ ವಿದ್ಯುತ್ ಮಂತ್ರಿಗಳು ಹೆಚ್ಚಿಗೆ ವಿದ್ಯುತ್ ಕಂಬವನ್ನು ಈ ಯೋಜನೆಯನ್ವಯ ರೂಪಿಸಿಕೊಂಡು ಹೆಚ್ಚಿಗೆ ಜನರಿಗೆ ಈ ಸೌಲಭ್ಯದ ಅನುಕೂಲತೆಯನ್ನು ಸಿಗುವ ರೀತಿಯಲ್ಲಿ ಕ್ರಮ ಕೈಗೊಳ್ಳುವಂತೆ ತಮ್ಮ ಮಂಜೂಷಾಂತರ ಮಾನ್ಯ ಮಂತ್ರಿಗಳನ್ನು ಒತ್ತಾಯ ಪಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ೧೯೮೬–೮೭ರಲ್ಲಿ ಪುತ್ತೂರು ತಾಲ್ಲೂಕಿನಲ್ಲಿ ೪೦೦ ಮನೆಗಳಿಗೆ ೨ ಟ್ಯೂಬ್‌ಲೈಟ್ ಕೊಡಲು ಭಾಗ್ಯಜ್ಯೋತಿ ಯೋಜನೆಯಲ್ಲಿ ಸೇರಿಸಲಾಗಿತ್ತು. ಈ ೪೦೦ ಮನೆಗಳಿಗೆ ವಿದ್ಯುತ್ ಒದಗಿಸಲು ೪೦ ಕಂಬಗಳನ್ನು ಅಂದಾಜು ಪಟ್ಟಿಯಲ್ಲಿ ಮಂಜೂರಾಗಿತ್ತು. ಆದರೆ ಮನೆಗಳು ದೂರ ದೂರ ಇರುವುದರಿಂದ ಈ ಕಂಬಗಳ ಉಪಯೋಗ ಪಡೆದು ೧೯೮೬–೮೭ ರಲ್ಲಿ ೨೬೮ ಮನೆಗಳಿಗೆ ಮಾತ್ರ ಎರಡು ಟ್ಯೂಬ್ ಲೈಟ್ ಒದಗಿಸಲಾಯಿತು. ಉಳಿದ ೧೩೨ ಮನೆಗಳಿಗೆ ಎರಡು ಟ್ಯೂಬ್‌ಲೈಟ್ ಒದಗಿಸಲು ಇನ್ನೂ ೨೦೦ ಕಂಬಗಳು ಬೇಕಾಗಿವೆ. ಈ ೨೦೦ ಹೆಚ್ಚಿನ ಕಂಬಗಳಿಗೆ ಬೇಕಾಗುವ ಹಣವನ್ನು ಕಮರ್ಷಿಯಲ್ ಬ್ಯಾಂಕ್‌ನವರು ಕೊಟ್ಟರೆ ಮಂಡಳಿಯವರು ಇನ್ನು ೨–೩ ತಿಂಗಳಲ್ಲಿ ಉಳಿದ ೧೩೨ ಮನೆಗಳಿಗೆ ಎರಡು ಟ್ಯೂಬ್‌ಲೈಟ್ ದೀಪಗಳನ್ನು ಒದಗಿಸಲಾಗುವುದು.

೧೩ ಬೆಂಗಳೂರು ಪುತ್ತೂರು ಮಾರ್ಗದಲ್ಲಿ ರಾತ್ರಿ ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸುವುದು

† ಶ್ರೀ ಕೆ. ಕುಶಾಲ (ಸುಳ್ಯ).— ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ವತಿಯಿಂದ ಕಳೆದ ೬ ತಿಂಗಳುಗಳಿಂದ ಸುಳ್ಯ ತಾಲ್ಲೂಕಿನಲ್ಲಿ ಮಂಗಳೂರು ವಿಭಾಗದ ಪುತ್ತೂರು ಡಿಪೋದಿಂದ ಪುತ್ತೂರು–ಬೆಳ್ಳಾರೆ, ಸುಳ್ಯ, ಮಡಿಕೇರಿ, ಮೈಸೂರು, ಬೆಂಗಳೂರಿಗೆ ಸೆಮಿ ಲಕ್ಷುರಿ ಬಸ್ಸು ಒಂದನ್ನು ಕೆಲವು ವರ್ಷಗಳ ಹಿಂದಿನ ಬೇಡಿಕೆಯಂತೆ ಹೊರಡಿಸಲಾಗಿದೆ. ಪ್ರತಿ ರಾತ್ರಿ ಈ ಬಸ್ಸು ಪುತ್ತೂರಿನಿಂದ ೭–೪೫ಕ್ಕೆ ಬಿಟ್ಟು ಮೇಲೆ ನಮೂದಿಸಿದ ರಸ್ತೆಯಲ್ಲಿ ಬೆಂಗಳೂರು ತಲುಪುವುದು. ಪ್ರತೀ ರಾತ್ರಿ ೧೧–೩೦ಕ್ಕೆ ಬೆಂಗಳೂರಿನಿಂದ ಬಿಟ್ಟು, ಬೆಳಗ್ಗೆ ಪುತ್ತೂರು ತಲುಪುವುದು. ಸದ್ರಿ ಈ ಬಸ್ಸಿಗೆ ಬೆಂಗಳೂರಿನಿಂದ, ಬೆಂಗಳೂರು ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಡಿಪೋದ ಟಿ.ಸಿ.ಯವರು ಮಂಗಳೂರ